ತಣ್ಣೀರು ಬಾವಿ ವಿದ್ಯುತ್ ಕಂಪನಿ

2486(3122) ಶ್ರೀ ಯೋಗೀಶ್ ಭಟ್. ಎನ್. (ಮಂಗಳೂರು) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತಣ್ಣೀರು ಬಾವಿ ವಿದ್ಯುತ್ ಕಂಪನಿ ವಿದ್ಯುತ್ ಉತ್ಪಾದನೆಯನ್ನು ಯಾವಾಗ ಆರಂಭಮಾಡುವುದು;

ಆ) ರಾಜ್ಯ ಸರಕಾರ ಈ ಉತ್ಪಾದನೆಗೆ ಕೊಟ್ಟ ಪ್ರೋತ್ಸಾಹ, ಸೌಲಭ್ಯ ಅನುದಾನಗಳು ಹಾಗೂ ಸ್ಥಳ ಎಷ್ಟು; ಇದನ್ನು ಯಾವ ನಿಬಂಧನೆಯ ಮೇಲೆ ಕೊಡಲಾಗಿದೆ;

ಇ) ಈ ಸಂಸ್ಥೆ ಉತ್ಪಾದಿಸುವ ವಿದ್ಯುತ್‌ಗೆ ಯೂನಿಟ್ ದರ ಎಷ್ಟು; ಮಾರಾಟ ಮಾಡುವ ದರ ಎಷ್ಟು; ಸರ್ಕಾರ ಯಾವ ದರದಲ್ಲಿ ವಿದ್ಯುತ್ ಖರೀದಿಸಲು ನಿರ್ಧರಿಸಿದೆ; ಇದರಿಂದ ಕೆ.ಪಿ.ಟಿ.ಸಿ.ಎಲ್ ಹಾಗೂ ಕೆ.ಪಿ.ಸಿ.ಗೆ ಬರುವ ಲಾಭ ಎಷ್ಟು?

ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು) :—

ಅ) ತಣ್ಣೀರು ಬಾವಿ ವಿದ್ಯುತ್ ಕಂಪನಿಯು ದಿನಾಂಕ: 8.5.2001 ರಿಂದ ವಿದ್ಯುತ್ ಉತ್ಪಾದನೆಯನ್ನು ಮಾಡುತ್ತಿದೆ.

ಆ) ರಾಜ್ಯ ಸರ್ಕಾರವು ಈ ಯೋಜನೆಯನ್ನು ಅನುಷ್ಠಾನಗೊಳಿಸಲು 48.16 ಎಕರೆ ಭೂಮಿಯನ್ನು ಮಂಜೂರು ಮಾಡಿದೆ. ಕಂಪನಿಯು ಈ ಭೂಮಿಯನ್ನು ಕೆಐಎಡಿಬಿ ಯಿಂದ ನೇರವಾಗಿ ಖರೀದಿಸಿದೆ. ಈ ಯೋಜನೆಯ ಅನುಷ್ಠಾನಕ್ಕಾಗಿ ಸರ್ಕಾರವು ಎಲ್ಲಾ ರೀತಿಯ ಮಾರಾಟ ತೆರಿಗೆ, ಎಂಟ್ರಿ ತೆರಿಗೆ, ಸ್ಟಾಂಪ್ ಶುಲ್ಕ ಹಾಗೂ ವಿದ್ಯುತ್ ಶುಲ್ಕ ವಿನಾಯಿತಿ ನೀಡಿರುತ್ತದೆ. ಈ ರಿಯಾಯಿತಿಗಳನ್ನು ಐಪಿಪಿ ಕರಾರಿನನ್ವಯ ನೀಡಲಾಗಿದೆ.

ಇ) ವಿದ್ಯುತ್ ಉತ್ಪಾದನೆಯ ದರದ ಬಗ್ಗೆ ಮಾಹಿತಿಯು ಕ.ವಿ.ಪ್ರ.ನಿ.ನಿ. ಯಲ್ಲಿ ಲಭ್ಯವಿರುವುದಿಲ್ಲ. ವಿದ್ಯುತ್ ಖರೀದಿ ಒಪ್ಪಂದ ಪ್ರಕಾರ ವಿದ್ಯುತ್ ಖರೀದಿ ದರವು ಮೊದಲ ವರ್ಷದಲ್ಲಿ ವಿನಿಮಯ ದರ ಪ್ರತಿ ಯು.ಎಸ್. ಡಾಲರ್ ಗೆ ರೂ. 46.38 ಮತ್ತು ನ್ಯಾಫ್ತಾ ಇಂಧನ ದರ ಪ್ರತಿ ಕಿ.ಗ್ರಾಂಗೆ ರೂ. 14.32 ನಂತೆ ಪ್ರತಿ ಯೂನಿಟ್‌ಗೆ ರೂ. 4.73 ಎಂದು ಅಂದಾಜು ಮಾಡಲಾಗಿದೆ.

ಈ ಯೋಜನೆಯಿಂದ ಖರೀದಿಸಲಾಗುತ್ತಿರುವ ವಿದ್ಯುತ್ತನ್ನು ರಾಜ್ಯದ ವಿದ್ಯುತ್ ಬೇಡಿಕೆಯನ್ನು ಪೂರೈಕೆ ಮಾಡುವ ಸಲುವಾಗಿ ಕೆ.ಪಿ.ಸಿ.ಟಿ.ಎಲ್. ಖರೀದಿಸುತ್ತಿದೆ.